ದಿನಾಂಕ: 25.11.2020

# ಪತ್ರಿಕಾ ಪ್ರಕಟಣೆ

## ರೇರಾ ಪ್ರಾಧಿಕಾರಕ್ಕೆ ಡಿಸೆಂಬರ್ 30ರೊಳಗೆ ತ್ರೈಮಾಸಿಕ ವರದಿ ಸಲ್ಲಿಸಲು ಸೂಚನೆ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೊಂದಾಯಿಸಿಕೊಂಡಿರುವ ಯೋಜನೆಗಳ 1437 ಅಭಿವೃದ್ಧಿದಾರರು ಈವರೆಗೆ ಮೊದಲನೆಯ ತ್ರೈಮಾಸಿಕ ಯೋಜನೆ ಪ್ರಗತಿ ವಿವರವನ್ನು ರೇರಾ ವೆಬ್ ಪೋರ್ಟಲ್‌ಗೆ ನಮೂದು ಮಾಡಿಕೊಂಡಿರುವುದಿಲ್ಲ. ಇದರಿಂದ ರೇರಾ ಪ್ರಾಧಿಕಾರದಲ್ಲಿ ಯೋಜನೆಗಳ ಪ್ರಗತಿ ವಿವರ ಮತ್ತು ಲೆಕ್ಕಪತ್ರಗಳ ಪರಿಶೀಲನೆಗೆ ಸಾಧ್ಯವಾಗಿರುವುದಿಲ್ಲ.

ರೇರಾ ಪ್ರಾಧಿಕಾರವು ಈಗಾಗಲೇ ಅಭಿವೃದ್ಧಿದಾರರುಗಳು ತಮ್ಮ ಯೋಜನೆಗಳ ತ್ರೈಮಾಸಿಕ ಪ್ರಗತಿ ವಿವರಗಳನ್ನು ಕಲಂ 11(1)(e) ಮತ್ತು 15(D) ರಡಿಯಲ್ಲಿ ವೆಬ್‌ಪೋರ್ಟಲ್ ಮೂಲಕ ಯೋಜನೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸುವಂತೆ ದಿನಾಂಕ: 01.08.2020, ದಿನಾಂಕ:29.08.2020 ರಂದು ಹಾಗೂ ಅಂತಿಮವಾಗಿ ದಿನಾಂಕ:17.09.2020 ರಲ್ಲಿ ನೋಟೀಸ್ ಜಾರಿ ಮಾಡಲಾಗಿರುತ್ತದೆ.

ಗ್ರಾಹಕರ ಹಿತದೃಷ್ಟಿಯಿಂದ ರೇರಾ ಕಾಯ್ದೆ ಮತ್ತು ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ರೇರಾ ಕಾಯ್ದೆ 4(2)(1)(D) ರಂತೆ ಯೋಜನೆಯ ಪ್ರಗತಿ ವಿವರ ಮತ್ತು ಲೆಕ್ಕಪತ್ರಗಳ ಪರಿಶೀಲನೆಗೆ ಅಭಿವೃದ್ಧಿದಾರರು ತಮ್ಮಗಳ ತ್ರೈಮಾಸಿಕ ಪ್ರಗತಿ ವರದಿಯನ್ನು ಸಲ್ಲಿಸಬೇಕಿರುತ್ತದೆ. ಆದರೆ ತಮ್ಮ ತ್ರೈಮಾಸಿಕ ಪ್ರಗತಿ ವರದಿಯನ್ನು ಸಲ್ಲಿಸದೇ ಇರುವ ಅಭಿವೃದ್ಧಿದಾರರಿಗೆ ಕಾಯ್ದೆ 7(1) ರಡಿ ಅಭಿವೃದ್ಧಿದಾರರುಗಳ ನೊಂದಣಿ ಸಂಖ್ಯೆಯನ್ನು ರದ್ದುಮಾಡುವ ಮತ್ತು ಕಲಂ 63 ರಡಿ ಯೋಜನಾ ವೆಚ್ಚದ ಶೇಕಡಾ 5% ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆದ್ದರಿಂದ ರೇರಾ ಪ್ರಾಧಿಕಾರದಲ್ಲಿ ನೊಂದಾಯಿಸಿಕೊಂಡು ತ್ರೈಮಾಸಿಕ ಪ್ರಗತಿ ವಿವರ ಮತ್ತು ವಾರ್ಷಿಕ ವರದಿ ಸಲ್ಲಿಸದಿರುವ 1437 ಅಭಿವೃದ್ಧಿದಾರರುಗಳು ಈ ಕೂಡಲೆ ತಮ್ಮಗಳ ಯೋಜನೆಯ ತ್ರೈಮಾಸಿಕ ಪ್ರಗತಿ ವರದಿಯನ್ನು ಡಿಸೆಂಬರ್ 30ರೊಳಗಾಗಿ ಈ ಪ್ರಾಧಿಕಾರದ ವೆಬ್‌ಪೋರ್ಟ್‌ಗೆ ಸಲ್ಲಿಸಲು ಅಂತಿಮವಾಗಿ ತಿಳಿಸಲಾಗಿದೆ. ತಪ್ಪಿದ್ದಲ್ಲಿ ರೇರಾ ಕಾಯ್ದೆಯನ್ವಯ ಕ್ರಮ ಜರುಗಿಸುವುದಾಗಿ ಈ ಮೂಲಕ ತಿಳಿಸಲಾಗಿದೆ.

ಪ್ರಾಧಿಕಾರಕ್ಕೆ ತ್ರೈಮಾಸಿಕ ಪ್ರಗತಿ ವಿವರ ಸಲ್ಲಿಸದ 1437 ಅಭಿವೃದ್ಧಿದಾರರ ಪಟ್ಟಿಯನ್ನು ಪ್ರಾಧಿಕಾರದ ವೆಬ್‌ಪೋರ್ಟಲ್ rera.karnataka.gov.in ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

K. S. Latha Kumari

(ಕೆ.ಎಸ್.ಲತಾಕುಮಾರಿ)
ಕಾರ್ಯದರ್ಶಿ
ರೇರಾ ಪ್ರಾಧಿಕಾರ